# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1908 |
| ಉತ್ತರಿಸಬೇಕಾದ ದಿನಾಂಕ | : | 16.03.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೇಂದ್ರ ಸರ್ಕಾರ ಪುರಸ್ಕೃತ ಮತ್ತು ರಾಜ್ಯ ವಲಯದ ಯೋಜನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು ಯಾವುವು; (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಮತ್ತು ರಾಜ್ಯ ವಲಯದ ಯೋಜನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ವಿವರ ಅನುಬಂಧದಲ್ಲಿ ನೀಡಿದೆ. |
| ಆ | ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಮತ್ತು ಪ್ರಸ್ತುತ ವರ್ಷದಲ್ಲಿ ದೊರೆತಿರುವ ನೆರವು ಮತ್ತು ಸೌಲಭ್ಯಗಳು ಯಾವುವು; (ವರ್ಷವಾರು ಮತ್ತು ಯೋಜನಾವಾರು ಬಳಕೆ ವಿವರದೊಂದಿಗೆ ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳು: |

**1.ರಾಷ್ಟ್ರೀಯ ಗೋಕುಲ್ ಮಿಷನ್:ಶೇಕಡ 100 ಕೇಂದ್ರದ ಪಾಲು** ಬಿಡುಗಡೆಯಾದ ಅನುದಾನ: (ರೂ ಲಕ್ಷಗಳಲ್ಲಿ)

| 2019-20 | | 2020-21 | | 2021-22 | |
|---|---|---|---|---|---|
| ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು |
| 756.47 | 685.15 | 101.25 | 101.25 | 1154.81 | 245.57 |

**2. ರಾಷ್ಟ್ರೀಯ ಜಾನುವಾರು ಮಿಷನ್: ಕೇಂದ್ರದ ಪಾಲು ಶೇಕಡ 60 ಹಾಗೂ ರಾಜ್ಯದ ಪಾಲು ಶೇಕಡ 40**

ಬಿಡುಗಡೆಯಾದ ಅನುದಾನ: (ರೂ ಲಕ್ಷಗಳಲ್ಲಿ)

| 2019-20 | | 2020-21 | | 2021-22 | |
|---|---|---|---|---|---|
| ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು |
| 919.304 | 919.304 | 0 | 0 | 1191.43 (ಬಿಡುಗಡೆ ಹಂತದಲ್ಲಿ ರುತ್ತದೆ) | 0 |

**3. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ: ಕೇಂದ್ರದ ಪಾಲು ಶೇಕಡ 60 ಹಾಗೂ ರಾಜ್ಯದ ಪಾಲು ಶೇಕಡ 40**

| ಕ್ರ.ಸಂ. | ವರ್ಷ | ಅನುದಾನ ಬಿಡುಗಡೆ (ರೂ ಕೋಟಿಗಳಲ್ಲಿ) |
|---|---|---|
| 1 | 2019-20 | 34.58 |
| 2 | 2020-21 | 23.82 |
| 3 | 2021-22 | 2.50 |

<table>
<tr>
<td></td>
<td></td>
<td>
4. ASCAD: ಕೇಂದ್ರದ ಪಾಲು ಶೇಕಡ 60 ಹಾಗೂ ರಾಜ್ಯದ ಪಾಲು ಶೇಕಡ 40<br><br>
ಆಸ್ಕಾಡ್ ಕಾರ್ಯಕ್ರಮದಡಿ ಜಾನುವಾರುಗಳಲ್ಲಿ ಕಂಡುಬರುವ ಆರ್ಥಿಕ ಪ್ರಾಮುಖ್ಯತೆಯುಳ್ಳ ರೋಗಗಳಾದ ಕರುಳು ಬೇನೆ, ನೀಲಿನಾಲಿಗೆ ರೋಗ, ಗಳಲೆ ರೋಗ, ನೆರಡಿ ರೋಗ ಹಾಗೂ ರೇಬೀಸ್ ರೋಗಗಳ ವಿರುದ್ಧ ಲಸಿಕೆಗಳನ್ನು ಹಾಕಲಾಗುತ್ತಿದೆ.<br><br>
5. PPR-CP: ಕೇಂದ್ರದ ಪಾಲು ಶೇಕಡ 60 ಹಾಗೂ ರಾಜ್ಯದ ಪಾಲು ಶೇಕಡ 40<br>
ಪಿ.ಪಿ.ಆರ್-ಸಿ.ಪಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಕಾರ್ಯಕ್ರಮದಡಿ ಪಿ.ಪಿ.ಆರ್ ರೋಗದ ವಿರುದ್ಧ ಲಸಿಕೆ ಹಾಕಲಾಗುವುದು.<br><br>
ASCAD ಹಾಗೂ PPR-CP ಯೋಜನೆಯ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ.
<table>
<tr><th colspan="2">2019-20</th><th colspan="2">2020-21</th><th colspan="2">2021-22 ಫೆಬ್ರವರಿ-2022 ರ ಅಂತ್ಯದವರೆಗೆ</th></tr>
<tr><th>ಬಿಡುಗಡೆ</th><th>ವೆಚ್ಚ</th><th>ಬಿಡುಗಡೆ</th><th>ವೆಚ್ಚ</th><th>ಬಿಡುಗಡೆ</th><th>ವೆಚ್ಚ</th></tr>
<tr><td>1685.03</td><td>1541.32</td><td>2688.19</td><td>2438.58</td><td>413.71</td><td>292.38</td></tr>
<tr><td>213.6</td><td>212.39</td><td>185.11</td><td>0</td><td>308.52</td><td>209.53</td></tr>
</table>
</td>
</tr>
<tr>
<td>ಇ</td>
<td>ರಾಜ್ಯ ಸರ್ಕಾರ ಗೋ-ಸಂರಕ್ಷಣೆ ಕಾಯ್ದೆ ಜಾರಿಗೆ ತಂದ ನಂತರ, ಗೋಶಾಲೆಗಳನ್ನು ತೆರೆಯಲು ಮತ್ತು ನಿರ್ವಹಿಸಲು ಕಳೆದ 2 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಪಡೆದಿರುವ ಅನುದಾನವೆಷ್ಟು? (ಪೂರ್ಣ ಮಾಹಿತಿ ನೀಡುವುದು)</td>
<td>ರಾಜ್ಯ ಸರ್ಕಾರ ಗೋ-ಸಂರಕ್ಷಣೆ ಕಾಯ್ದೆ ಜಾರಿಗೆ ತಂದ ನಂತರ, ಗೋಶಾಲೆಗಳನ್ನು ತೆರೆಯಲು ಮತ್ತು ನಿರ್ವಹಿಸಲು ಕಳೆದ 2 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಪಡೆದಿರುವುದಿಲ್ಲ.</td>
</tr>
</table>

**ಇ-ಪಸಂಮೀ 85 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1908 ಕ್ಕೆ ಅನುಬಂಧ

| | ರಾಜ್ಯವಲಯದ ಯೋಜನೆಗಳು | |
|---|---|---|
| ಕ್ರ ಸಂ | ಯೋಜನೆಗಳು | ವಿವರ |
| 1 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರ ಅನ್ವಯ ಬಳಕೆಯಾಗದ ಮೊತ್ತ | • ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹಾಲು ಕರೆಯುವ ಯಂತ್ರ ಶೇ. 90 ರ ಸಹಾಯಧನದೊಂದಿಗೆ ವಿತರಿಸಲಾಗಿದೆ. |
| 2. | ಪಿಂಜರಾಪೋಲ್ ಮತ್ತು ಇತರೆ ಗೋಶಾಲೆಗಳಿಗೆ ಬೆಂಬಲ | • ಪಿಂಜರಾಪೋಲ್ ಹಾಗೂ ಇತರೆ ಗೋಶಾಲೆಗಳಲ್ಲಿರುವ ಪ್ರಾಣಿಗಳ ನಿರ್ವಹಣೆ,<br>• ಪ್ರತಿ ಜಿಲ್ಲೆಗೆ ಒಂದರಂತೆ ಗೋಶಾಲೆ ನಿರ್ವಹಣೆ. |
| 3 | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ: | • ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ 6+1 ಕುರಿ/ಮೇಕೆ ಘಟಕ ವಿತರಿಸುವುದು,<br>• ವಲಸೆ ಕುರಿಗಾಗರಿಗೆ ಸಂಚಾರಿ ಟೆಂಟ್, ಸೋಲಾರ್ ಟಾರ್ಚ್, ರಬ್ಬರ್ ಪ್ಲೋರ್ ಮ್ಯಾಟ್ ಮತ್ತು ರೇನ್ ಕೋಟ್ ಸೇರಿದಂತೆ ಪರಿಕರಗಳ ಕಿಟ್‌ಗಳ ವಿತರಣೆ ಮಾಡಲಾಗುವುದು.<br>• ಕುರಿಗಾರರಿಗೆ ವೈಜ್ಞಾನಿಕ ಕುರಿ ಸಾಕಾಣಿಕೆಯಲ್ಲಿ ತರಬೇತಿ ನೀಡಲಾಗುವುದು. |
| 4 | ಹಾಲು ಉತ್ಪಾದಕರಿಗೆ ಉತ್ತೇಜನ: | • ಹಾಲು ಉತ್ಪಾದನೆಗೆ ಉತ್ತೇಜನ ನೀಡಲು ಕರ್ನಾಟಕ ಹಾಲು ಮಹಾ ಮಂಡಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್‌ಗೆ ರೂ. 5/- ರಂತೆ ಪ್ರೋತ್ಸಾಹಧನ ನೀಡಲಾಗುವುದು. |
| 5 | ವಿಸ್ತರಣಾ ಘಟಕಗಳ ಬಲಪಡಿಸುವಿಕೆ: | • ಮಿಶ್ರತಳಿ ಕರುಗಳ/ ಜಾನುವಾರು ಪ್ರದರ್ಶನ, ಹಾಲು ಕರೆಯುವ ಸ್ಪರ್ದೆ, ಪ್ರಾಣಿ ಜನ್ಯ ರೋಗಗಳ ಜಾಗೃತಿ ಶಿಬಿರ ರೈತರ ತರಬೇತಿ ಮತ್ತು ಪ್ರವಾಸ, ಜಿಲ್ಲಾ ಮಟ್ಟದ ಪಶುಮೇಳ, ಜಾನುವಾರು ಜಾತ್ರೆ, ತಾಂತ್ರಿಕ ಸಂಕಿರಣ, |
| 6 | ಜಾನುವಾರುಗಳ ಆರೋಗ್ಯ ಶಿಬಿರ | • ಉಚಿತ ಜಾನುವಾರು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಾನುವಾರುಗಳ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. |
| 7 | ಪಶು ಸಂಜೀವಿನಿ | • ಪಶುಪಾಲಕರ ಮನೆಯ ಬಾಗಿಲಲ್ಲಿ ರೋಗಗ್ರಸ್ಥ ಜಾನುವಾರುಗಳಿಗೆ ವಿಶೇಷ ತುರ್ತು ಚಿಕಿತ್ಸೆ ನೀಡಲು 15 ಜಿಲ್ಲೆಗಳಲ್ಲಿ "ಸುಸಜ್ಜಿತ ಪಶುಚಿಕಿತ್ಸಾ ವಾಹನ"ಗಳನ್ನು ಒದಗಿಸಲಾಗಿದೆ. |
| 8 | ಅಮೃತ ಸಿರಿ | • ಇಲಾಖೆಯ ಎಲ್ಲಾ ಜಾನುವಾರು ಕ್ಷೇತ್ರಗಳಲ್ಲಿ ಹುಟ್ಟುವ ಹೆಚ್ಚುವರಿ ಹೆಣ್ಣು ಕರುಗಳನ್ನು/ ಕಡಸುಗಳನ್ನು/ ಹಸುಗಳನ್ನು ಪುಸ್ತಕ ಬೆಲೆಯ ಶೇಕಡ 25 ರಂತೆ ಜಿಲ್ಲೆಯ ರೈತರಿಗೆ, ದೇವದಾಸಿಯರಿಗೆ, ವಿಧವೆಯರಿಗೆ, ಶವ ಸಂಸ್ಕಾರ ಕಾರ್ಮಿಕರಿಗೆ ವಿತರಣೆ ಮಾಡಲಾಗುವುದು. |
| 9 | ಅಮೃತ ಧಾರೆ | • ಇಲಾಖೆಯ ಎಲ್ಲಾ ಜಾನುವಾರು ಕ್ಷೇತ್ರಗಳಲ್ಲಿ ಹುಟ್ಟುವ ಹೆಚ್ಚುವರಿ ಗಂಡು ಕರುಗಳನ್ನು/ ಬೀಜದ ಹೋರಿಗಳನ್ನು ಇಲಾಖೆ ನಿಗದಿ ಪಡಿಸಿದ ಮಾರಾಟದ ಬೆಲೆಯಂತೆ ರೈತರಿಗೆ, ವಿತರಣೆ ಮಾಡಲಾಗುವುದು. |
| 10 | ಪ್ರಾಣಿಕಲ್ಯಾಣ ಸಹಾಯವಾಣಿ | • ಜಾನುವಾರುಗಳಿಗೆ 24/7 ನಿರಂತರ ಸೇವೆಯನ್ನು ಒದಗಿಸಲು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ರೈತರು ಸಹಾಯವಾಣಿಯನ್ನು ಪ್ರಾರಂಭಿಸಲಾಗಿದ್ದು ಸಹಾಯವಾಣಿ ಸಂಖ್ಯೆ 8277100200 ಮೂಲಕ ಸಂಪರ್ಕಿಸಿ ಇಲಾಖೆಯ ತಾಂತ್ರಿಕ ಸೇವೆಯನ್ನು ಪಡೆಯಬಹುದಾಗಿದೆ. |
| 11 | ಕೃತಕ ಗರ್ಭಧಾರಣೆ | • ರಾಜ್ಯದಲ್ಲಿರುವ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ. |

| | | |
|---|---|---|
| | **ಕೇಂದ್ರ ಪುರಸ್ಕೃತ ಯೋಜನೆಗಳು :** | |
| 1. | ಲಸಿಕಾ ಕಾರ್ಯಕ್ರಮ | • ಗುರುತಿಸಲ್ಪಟ್ಟ ಸಾಂಕ್ರಾಮಿಕ ರೋಗಗಳ ವಿರುದ್ದ ಲಸಿಕೆ ಹಾಕುವುದು.<br>• ಕಾಲುಬಾಯಿಜ್ವರ ಮತ್ತು ಕಂದುರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಕ್ಕೆ ಶೇ. 100 ಕೇಂದ್ರದ ಅನುದಾನ<br>• ಆಸ್ಕ್ಯಾಡ್ ಯೋಜನೆಯಡಿಯಲ್ಲಿ ಶೇ. 60 ಕೇಂದ್ರದ ಪಾಲು ಹಾಗೂ ಶೇ. 40 ರಾಜ್ಯದ ಪಾಲು ಅನುಪಾತದಲ್ಲಿ ಅನುದಾನ (ಗಳಲೇರೋಗ, ಚಪ್ಪೆರೋಗ, ಕರುಳುಬೇನೆ, ನೆರಡಿರೋಗಗಳ ವಿರುದ್ದ ಲಸಿಕೆ ಹಾಕುವುದು.)<br>• ಪಿ.ಪಿ.ಆರ್ ರೋಗದ ವಿರುದ್ದ ಲಸಿಕಾ ಕಾರ್ಯಕ್ರಮಕ್ಕೆ ಶೇ. 60 ಕೇಂದ್ರದ ಪಾಲು ಹಾಗೂ ಶೇ. 40 ರಾಜ್ಯದ ಪಾಲು ಅನುಪಾತದಲ್ಲಿ ಅನುದಾನ |
| 2. | ರಾಷ್ಟ್ರೀಯ ಜಾನುವಾರು ಮಿಷನ್ (ಕೇಂದ್ರ ಪುರಸ್ಕಕೃತ ಯೋಜನೆ): | • ವಿಪತ್ತು ನಿರ್ವಹಣೆ-ಜಾನುವಾರು ವಿಮಾ ಯೋಜನೆ, |
| 3. | ಜಾನುವಾರು ಗಣತಿ | • ಜಾನುವಾರು ಗಣತಿಯು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಪ್ರತಿ ಐದು ವರ್ಷಗಳಿಗೊಮ್ಮೆ ಜಾನುವಾರು ಗಣತಿಯನ್ನು ಭಾರತ ಸರ್ಕಾರದ ಮಾರ್ಗಸೂಚಿಯಂತೆ 1919-20ನೇ ಸಾಲಿನಿಂದ ನಡೆಸಲಾಗುತ್ತಿದೆ.<br>• ಜಾನುವಾರು ಗಣತಿಯು ಕೇಂದ್ರ ವಲಯ ಯೋಜನೆಯಾಗಿರುತ್ತದೆ(100%).<br>• ಜಾನುವಾರುಗಳ ತಳಿವಾರು, ಪ್ರಬೇಧವಾರು, ಲಿಂಗವಾರು, ವಯೋಮಾನವಾರು ಮಾಹಿತಿ ಮತ್ತು ಕುಕ್ಕುಟಗಳ ಮಾಹಿತಿಯನ್ನು ಸಂಗ್ರಹಿಸುವುದು. |
| 4. | ಮಾದರಿ ಸಮೀಕ್ಷೆ ಯೋಜನೆಯಡಿ, ಹಾಲು, ಮಾಂಸ, ಮೊಟ್ಟೆ ಮತ್ತು ಉಣ್ಣೆ ಉತ್ಪಾದನೆ ಅಂದಾಜುಗಳು: (ಕೇಂದ್ರ-50%: ರಾಜ್ಯ-50%) | • ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆಯ ಬಗೆಗಿನ ಅಂದಾಜುಗಳನ್ನು ಮೂರು ಋತುಗಳಲ್ಲಿ ಬೇಸಿಗೆ, ಮಳೆ ಹಾಗೂ ಚಳಿಗಾಲಗಳಾಗಿ ವಿಂಗಡಿಸಿ ಇದಕ್ಕಾಗಿಯೇ ಆಯ್ದ ಹಳ್ಳಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸುವುದು. |
| I | **ರಾಷ್ಟ್ರೀಯ ಗೋಕುಲ ಮಿಷನ್ :** | |
| 1. | ರಾಷ್ಟ್ರೀಯ ದನ ಮತ್ತು ಎಮ್ಮೆ ತಳಿ ಅಭಿವೃದ್ಧಿ ಕಾರ್ಯಕ್ರಮ: | ರಾಷ್ಟ್ರೀಯ ಗೋಕುಲ ಮಿಷನ್ ಯೋಜನೆಯಡಿ, ರಾಷ್ಟ್ರೀಯ ದನ ಮತ್ತು ಎಮ್ಮೆ ತಳಿ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಬಿ.ಬಿ.) 2015-16ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಎನ್.ಪಿ.ಬಿ.ಬಿ. ಯೋಜನೆಯಡಿ ಇಲಾಖೆ ಹಾಗೂ ಕೆ.ಎಂ.ಎಫ್. ವತಿಯಿಂದ ಕೃತಕ ಗರ್ಭಧಾರಣೆ ಹಾಗೂ ಇತರೆ ಪಶುವೈದ್ಯಕೀಯ ಸೇವೆ ದೊರಕದ ಸ್ಥಳಗಳಲ್ಲಿ ಮೈತ್ರಿ ಕಾರ್ಯಕರ್ತರನ್ನು (Multipurpose Artificial Insemination Technicians in Rural India) ಆಯ್ಕೆ ಮಾಡಿ 2015-16ನೇ ಸಾಲಿನಿಂದ 2021-22 ಸಾಲಿನವರೆಗೆ ಒಟ್ಟು 1329 ಮೈತ್ರಿ ಕಾರ್ಯಕರ್ತರಿಗೆ ಕೃತಕ ಗರ್ಭಧಾರಣೆಯಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ. |
| 2. | ರಾಷ್ಟ್ರೀಯ ಗೋಕುಲ ಗ್ರಾಮ ಸ್ಥಾಪನೆ: | ರಾಷ್ಟ್ರೀಯ ಗೊಕುಲ್ ಗ್ರಾಮ ಕಾರ್ಯಕ್ರಮದಡಿ ಅಮೃತ್ ಮಹಲ್ ತಳಿ ಅಭಿವೃದ್ಧಿಗಾಗಿ ಲಿಂಗದಹಳ್ಳಿ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಗೋಕುಲ ಗ್ರಾಮ ಸ್ಥಾಪನೆಗೆ ಒಟ್ಟು ರೂ 310.00 ಲಕ್ಷ ಅನುದಾನವನ್ನು ಕೆ ಆರ್ ಐ ಡಿಎಲ್ ಸಂಸ್ಥೆಗೆ ಮೂಲ ಸೌಕರ್ಯ ಅಭಿವೃದ್ಧಿಗೆ ಬಿಡುಗಡೆಗೊಳಿಸಲಾಗಿರುತ್ತದೆ. |

| | | |
|---|---|---|
| 3. | ಭಾರತ ಸರ್ಕಾರದ ರಾಷ್ಟ್ರೀಯ ಕೃತಕ ಗರ್ಭಧಾರಣೆ ಕಾರ್ಯಕ್ರಮ | ರಾಜ್ಯದ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲ್ಬುರ್ಗಿ, ಕೊಪ್ಪಳ, ಕೊಡಗು, ಶಿವಮೊಗ್ಗ, ರಾಯಚೂರು, ಉತ್ತರ ಕನ್ನಡ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಡಿಮೆ ಉತ್ಪಾದಕತೆಯ ದೇಶಿ ಮತ್ತು ಅನಿರ್ದಿಷ್ಟ ತಳಿಯ ದನ ಮತ್ತು ಎಮ್ಮೆಗಳನ್ನು ಉತ್ಕೃಷ್ಟ ತಳಿಯ ದೇಶಿ ತಳಿ ದನ ಮತ್ತು ಎಮ್ಮೆಯ ವೀರ್ಯವನ್ನು ಬಳಸಿ ತಳಿ ಸಂವರ್ಧನೆ ಮಾಡುವ ನಿಟ್ಟಿನಲ್ಲಿ ಕೃತಕ ಗರ್ಭಧಾರಣೆ ಸೌಲಭ್ಯವನ್ನು ರೈತರ ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸಲಾಗುತ್ತಿದೆ. |
| II | ರಾಷ್ಟ್ರೀಯ ಜಾನುವಾರು ಮಿಷನ್ : | |
| | ವಿಪತ್ತು ನಿರ್ವಹಣೆ ಜಾನುವಾರು ವಿಮಾ ಯೋಜನೆ | ರಾಸುಗಳು ಆಕಸ್ಮಿಕವಾಗಿ ಮರಣ ಹೊಂದಿದಲ್ಲಿ ರೈತರಿಗೆ ಆಗುವ ಆರ್ಥಿಕ ನಷ್ಟ ಭರಿಸುವ ಉದ್ದೇಶದಿಂದ ಜಾನುವಾರುಗಳಿಗೆ ವಿಮೆ ಸೌಲಭ್ಯವನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ.<br>ಎನ್. ಎಲ್. ಎಂ. ಮಾರ್ಗ ಸೂಚಿಯ ಅನುಸಾರ ಪ್ರತಿ ಫಲಾನುಭವಿಯ ಗರಿಷ್ಠ 5 ರಾಸುಗಳನ್ನು ಅಥವಾ 50 ಕುರಿ/ಮೇಕೆ/ಹಂದಿ/ಮೊಲಗಳನ್ನು ವಿಮೆಗೆ ಒಳಪಡಿಸಬಹುದಾಗಿದ್ದು, ಎಪಿಎಲ್ ಫಲಾನುಭವಿಗಳಿಗೆ 50% ಮತ್ತು ಬಿಪಿಎಲ್/ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ 70% ಪ್ರೀಮಿಯಂ ಸಬ್ಸಿಡಿಯನ್ನು ಒದಗಿಸಲು ಅವಕಾಶವಿರುತ್ತದೆ.<br>2021-22 ನೇ ಸಾಲಿಗೆ ರೂ 1191.43 ಲಕ್ಷ ಹಣ ಬಿಡುಗಡೆಯನ್ನು ನಿರೀಕ್ಷಿಸಲಾಗಿದೆ . |
| III | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ : | |
| 1. | **Strengthening of Farmers Training Centres and creation of Infrastructure for skill development** | Creation of infrastructure for Training facility to the farmers at Veterinary Inspector Training Centre, Hassan |
| | | Strengthening of Veterinary assistant training centre, bellary |
| | | Creation of infrastructure for training facility to the farmers at veterinary assistant training center at belagavi |
| | | Construction of building for farmers training Center, Bidar |
| 2. | **Comprehensive Development of sheep and Goat in Karnataka** | Establishment of Goat Farms for Milk Production of Marketing Infrastructure of include Goat Milk Procurement |
| 3. | **Dairy & Dairy Infrastructure Development in Karnataka** | 100 MTPD Capacity Milk Powder Plant with 12 LLPD capacity Liquied Milk Processing Unit at Kanva, Chennapattana Taluk |
| | | Mysore Mega Dairy |
| 4. | **Strengthening Animal Health, Animal Breeding and Extension Services in Karnataka** | Strengthening of Disease Diagnosis Infrastructure by Supply of Digital WBC analyzer and HB analyzer and Large/Small animal ultrasound scanning machines for spot disease diagnosis |
| | | Strengthening of Existing Taluk veterinary Hospitals |
| | | Supply of Large Animal colour Ultra Sound Scanning Machine to taluk veterinary Hospital |
| 5. | **Strengthening Frozen Semen Production Centers and Livestock breeding farms for genetic upgradation.** | Existing Frozen Semen Production Centers at State Livestock Breeding and Training Center, Hesaraghatta. |
| | | State Semen Production Center, Hessaraghatta |
| | | Supply of eight liquid nitrogen silos for cold chain maintenance and storage of frozen semen |
| | | Bull Mother Farm at Hullenahalli |
| | | Bull Mother farm at Lingadahalli, Chikkamagalur District |

| | | |
|---|---|---|
| | | Establishing three new Amruthmahal cattle breeding centres at Bilavala (Chikkamagalur district), Bidare (Hassan district), Kynodu (Chitradurga district). |
| | | Procurement and distribution of Imported High Genetic Merit Holstein Friesian and Jersey breed Frozen Semen Doses for the bencfit of progressive dairy farmers in the State |
| 6. | **Piggery Development Programme** | Strengthening of existing piggery farms and make these as self-sustainable by utilizing the farm revenue at Hessaraghatta |
| 7. | **Pashu Bhagya :- Animal Induction Programme** | Assistance to SC/ST beneficiaries for induction of dairy animals (2 crossbreed Cows/ Buffaloes) |
| | | Sheep and Goat Development by induction of 10+1 Sheep/Goat units to SC/ST Beneficiaries. |
| | | Assistance to SC/ST beneficiaries for 500 broiler poultry units |
| 8. | **Fodder Development Programme** | Supply of Chaff Cutter at subsidy rates set by GOI |
| 9. | **Strengthening of Animal Vaccination and Diagnosis Services in Karnataka** | Upgradation of Vaccine storage, packing and dispatch at bangalore IAH&VB |
| | | Development of Recombinant Protien Based Diagnosis kits |
| 10. | **Research and Extension Projects of Veterinary University.** | Establishment of Model Feed Technology Unit, Fodder Museum and strengthening of Feed Analytical Laboratory for Knowledge and Skill Empowerment of Farmers to augment livestock Productivity in Malnad Region |
| 11. | **Formation of FPO** | Farmer's producers organization KSWDCL-5.304, KCPF- 1.591 & Piggery (Farms)- 1.06cr |
| 12. | **Piggery Development Programme** | Integrated Development of Piggery |
| | | Strengthening and Construction of Department piggery farms at Kudige, Koila, Bangarpet and Kalasa. |
| 13. | **Comprehensive Development of sheep and Goat in Karnataka** | Establishment of Mobile meat and Meat product stall |
| **IV** | ASCAD: ಕೇಂದ್ರದ ಪಾಲು ಶೇಕಡ 60 ಹಾಗೂ ರಾಜ್ಯದ ಪಾಲು ಶೇಕಡ 40 | ಆಸ್ಕಾಡ್ ಕಾರ್ಯಕ್ರಮದಡಿ ಜಾನುವಾರುಗಳಲ್ಲಿ ಕಂಡುಬರುವ ಆರ್ಥಿಕ ಪ್ರಾಮುಖ್ಯತೆಯುಳ್ಳ ರೋಗಗಳಾದ ಕರುಳು ಬೇನೆ, ನೀಲಿನಾಲಿಗೆ ರೋಗ, ಗಳಲೆ ರೋಗ, ನೆರಡಿ ರೋಗ ಹಾಗೂ ರೇಬೀಸ್ ರೋಗಗಳ ವಿರುದ್ಧ ಲಸಿಕೆಗಳನ್ನು ಹಾಕಲಾಗುತ್ತಿದೆ. |
| **V** | PPR-CP: ಕೇಂದ್ರದ ಪಾಲು ಶೇಕಡ 60 ಹಾಗೂ ರಾಜ್ಯದ ಪಾಲು ಶೇಕಡ 40 | ಪಿ.ಪಿ.ಆರ್–ಸಿ.ಪಿ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗುತ್ತಿದ್ದು, ಸದರಿ ಕಾರ್ಯಕ್ರಮದಡಿ ಪಿ.ಪಿ.ಆರ್ ರೋಗದ ವಿರುದ್ಧ ಲಸಿಕೆ ಹಾಕಲಾಗುವುದು. |